ಅಸೈನ್‌ಮೆಂಟ್ ದೊರಕಿತು. ಅರ್ಚನಾಗೆ ಅಲ್ಲಿಯವರೆಗೆ ಕಥೆ ಬರೆಯುವ, ದೃಶ್ಯಾವಳಿಗಳನ್ನು ಚಿತ್ರೀಕರಿಸುವ ಅವನುಭವ ಇರಲಿಲ್ಲ ಹಾಗಾಗಿ ಬೆಂಗಳೂರಿನಲ್ಲಿಯೇ ಇರುವ 'ಎಲ್.ವಿ. ಪ್ರಸಾದ್ ಫಿಲಂ ಇನ್‌ಸ್ಟಿಟ್ಯೂಟ್'ಗೆ ಹೋಗಿ ಫಿಲ್ಮ್ ಮೇಕಿಂಗ್ ಕೋರ್ಸ್ ಮಾಡಿದರು.

ಸಿನಿಮಾಗಳಲ್ಲಿ ನಟಿಸುವ ಅವಕಾಶಗಳಿಗಾಗಿ ಎದುರು ನೋಡುತ್ತಿದ್ದ ಅರ್ಚನಾಗೆ ನಾಯಕಿಯಾಗಿಯೇ ಪದಾರ್ಪಣೆ ಮಾಡುವ ಅವಕಾಶ ಸಿಕ್ಕಿದ್ದು ಎರಡು ಬಾರಿ ಅಡಿಷನ್‌ಲ್ಲಿ ಭಾಗವಹಿಸಿದ ಮೇಲೆಯೇ; ಅದೂ ಚಿತ್ರೀಕರಣದ ಹಿಂದಿನ ದಿನವೇ ಅಂತಿಮವಾಗಿದ್ದಂತೆ.

'ಡಿಯರ್ ಸತ್ಯ ಸಿನಿಮಾಗೆ ನಾನು ನಾಯಕಿಯಾಗಿ ಆಯ್ಕೆಯಾಗಿದ್ದೇನೆ ಎಂದು ನನಗೆ ಗೊತ್ತಾಗಿದ್ದು ಚಿತ್ರೀಕರಣದ ಹಿಂದಿನ ದಿನವೇ. ಅವತ್ತೇ ಕಥೆ, ಪಾತ್ರದ ಕುರಿತೂ ಹೇಳಿದರು. ಸಣ್ಣ ಪುಟ್ಟ ಜಾಹೀರಾತು, ಕಿರುಚಿತ್ರಗಳಲ್ಲಿ ನಟಿಸಿದ್ದರೂ ಸಿನಿಮಾವೊಂದಕ್ಕೆ ನಾಯಕಿಯಾಗಿ ನಟಿಸಬೇಕಾಗಿದ್ದು ನನ್ನನ್ನು ನರ್ವಸ್ ಮಾಡಿತ್ತು. ಮೊದಲಿಗೆ ಹಾಡಿನ ಚಿತ್ರೀಕರಣವೇ ಇತ್ತು. ನನಗೆ ಸಿನಿಮಾದ ತಾಂತ್ರಿಕ ವಿಷಯಗಳ ಬಗ್ಗೆ ಅಷ್ಟು ತಿಳಿವಳಿಕೆ ಇರಲಿಲ್ಲ. ಹಾಗಾಗಿ ಒದ್ದಾಡಿದೆ. ನಿರ್ದೇಶಕರು ತುಂಬ ತಾಳ್ಮೆಯಿಂದ ತಿದ್ದಿದರು. ಹೋಗುತ್ತ ಹೋಗುತ್ತ ರೂಢಿಯಾಯ್ತು. ಕ್ಯಾಮೆರಾ ಅಂದರೆ ನನಗೆ ಭಯ ಇರಲಿಲ್ಲ. ಕೊನೆಕೊನೆಗೆ ಸುಲಭವಾಗಿ ನಟಿಸಿದೆ. ಇನ್ನು ಮುಂದೆ ನಾನು ನಟನೆಯನ್ನು ನೋಡುವ ರೀತಿ, ನಟಿಸುವ ರೀತಿ ಎರಡೂ ಬೇರೆಯೇ ಆಗಿರುತ್ತದೆ' ಎಂದು ಮೊದಲ ಸಿನಿಮಾದ ನಟನೆಯ ಅನುಭವವನ್ನು ಅವರು ಹಂಚಿಕೊಳ್ಳುತ್ತಾರೆ.

'ಡಿಯರ್ ಸತ್ಯ' ಸಿನಿಮಾದಲ್ಲಿ ಅವರು ಅಂಜಲಿ ಎಂಬ ಹೆಸರಿನ ವಿದ್ಯಾರ್ಥಿನಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಅರ್ಚನಾ ಅವರ ಪ್ರಕಾರ ನಟನೆ ಎಂದರೆ ಆ ಕ್ಷಣದಲ್ಲಿ ಜೀವಿಸುವುದು. 'ನನ್ನ ಪ್ರಕಾರ ನಟನೆಯನ್ನು ಜಾಸ್ತಿ ಗಂಭೀರವಾಗಿ ತೆಗೆದುಕೊಳ್ಳಬಾರದು. ಜಾಸ್ತಿ ಪ್ಲ್ಯಾನ್ ಕೂಡ ಮಾಡಬಾರದು. ಆ ಕ್ಷಣದಲ್ಲಿ ಆ ಪಾತ್ರ ಮತ್ತು ಸನ್ನಿವೇಶವನ್ನು ಅನುಭವಿಸಬೇಕು. ಅದರಿಂದ ಸಹಜವಾಗಿ ಹುಟ್ಟುವ ಅಭಿವ್ಯಕ್ತಿಯನ್ನೇ ನಟಿಸಬೇಕು' ಎನ್ನುವ ಅರ್ಚನಾಗೆ ಮೊದಲ ಸಿನಿಮಾ ಸಾಕಷ್ಟು ಕಲಿಸಿಕೊಟ್ಟಿದೆ.

'ನನಗೆ ತೀರಾ ಇತ್ತೀಚಿನವರೆಗೆ ನಟಿಯಾಗಿ ಮುಂದುವರಿಯಬೇಕು ಎಂಬ ಮಹತ್ವಾಕಾಂಕ್ಷೆ ಇರಲಿಲ್ಲ. ಆದರೆ ಈ ಸಿನಿಮಾ ಮಾಡಿ ಮುಗಿಸಿದ ಮೇಲೆ ನಾನು ಏನು ಮಾಡಿದರೂ ಚಿತ್ರರಂಗದಲ್ಲಿಯೇ ಅನ್ನಿಸಿದೆ. ಇದನ್ನು ಬಿಟ್ಟು ಬೇರೆ ಏನನ್ನೂ ಮಾಡಲಾರೆ ಎಂದೂ ಅನಿಸಿಬಿಟ್ಟಿದೆ' ಎಂದು ಹೇಳುವ ಅರ್ಚನಾಗೆ, ಸಿನಿಮಾದಲ್ಲಿಯೇ ಮಹತ್ವವಾದುದನ್ನು ಸಾಧಿಸುವ ಕನಸು ಮತ್ತು ಛಲ ಎರಡೂ ಇದೆ. ■

# ಹೊಸ ದಾರಿಯಲ್ಲಿ ಸೈಕಲ್ ಏರಿದ ಮಾನ್ವಿತಾ ಕಾಮತ್


ಮಾನ್ವಿತಾ ಕಾಮತ್

ನಟಿ ಮಾನ್ವಿತಾ ಕಾಮತ್ 'ಮಂಕಿ'ಯಾಗಿದ್ದಾರೆ. ಅಷ್ಟೇ ಅಲ್ಲ, ಅದೇ ಮಂಕಿ ರೂಪದಲ್ಲಿ ಸೈಕಲ್ ಏರಿ ಹೊಸ ಗುರಿಯರಸಿ ಹೊರಟಿದ್ದಾರೆ.

ಇದೇನಿದು ಹೀಗಾಯ್ತು ಎಂದು ಗಾಬರಿಯಾಗಬೇಡಿ. ಸೈಕಲ್ ಏರಿ ಹೊರಟಿರುವ ಎರಡು ಮಂಕಿಗಳು, 'ಮ್ಯಾನ್‌ಕಿನ್' ಎಂಬ ಹೆಸರಿನ ಅವರ ಹೊಸ ಸಾಹಸದ ಲಾಂಛನ. ಏನಿದು ಮ್ಯಾನ್‌ಕಿನ್? ಅಕ್ಷರಗಳ ಆಟದ ಕುರಿತು ಹೇಳುವುದಾದರೆ ಮಾನ್ವಿತಾ ಕಾಮತ್ ಮತ್ತು ಅಂಕಿತಾ ಕಿಣಿ ಅವರ ಹೆಸರಿನ ಎರಡೆರಡು ಅಕ್ಷರಗಳನ್ನು ಹೆಕ್ಕಿಕೊಂಡು 'ಮ್ಯಾನ್‌ಕಿನ್' ಆಗಿದೆ. ಇದೊಂದು ಆ್ಯನಿಮೇಷನ್ ಸಂಸ್ಥೆ. ಚಿತ್ರರಂಗದಲ್ಲಿ ಆ್ಯನಿಮೇಷನ್ ತಂತ್ರಜ್ಞಾನದ ಹೊಸ ಸಾಧ್ಯತೆಗಳನ್ನು ಶೋಧಿಸುವ ಮತ್ತು ಪರಿಚಯಿಸುವ ಉದ್ದೇಶದಿಂದ ಹುಟ್ಟಿಕೊಂಡಿರುವ ಸಂಸ್ಥೆ. ಸ್ಟೋರಿಬೋರ್ಡ್, ಟೈಟಲ್ ಕಾರ್ಡ್ ಅನಿಮೇಷನ್, ವಿಎಫ್‌ – ಹೀಗೆ ಸಿನಿಮಾದಲ್ಲಿ ಆನಿಮೇಷನ್ ಬಳಕೆಯ ಎಲ್ಲ ಆಯಾಮಗಳನ್ನೂ ಈ ಸಂಸ್ಥೆ ಒದಗಿಸಲಿದೆ.

'ನಾನು ಓದಿದ್ದು ಆನಿಮೇಷನ್. ಇರುವುದು ಚಿತ್ರರಂಗದಲ್ಲಿ. ಇವೆರಡೂ ಕ್ಷೇತ್ರಗಳನ್ನು ಬೆಸೆಯುವಂಥ ಏನಾದರೂ ಮಾಡಬೇಕು ಎಂಬ ಆಸೆ ಮತ್ತು ಒಂದಿಷ್ಟು ಐಡಿಯಾಗಳು ತುಂಬಾ ದಿನಗಳಿಂದ ನನ್ನ ಮನಸಲ್ಲಿದ್ದವು. ಆದರೆ ಕೈಗೂಡಿರಲಿಲ್ಲ. ಇತ್ತೀಚೆಗೆ ನನ್ನ ಸಂಬಂಧಿಯೂ ಆದ ಅಂಕಿತಾ ಕಿಣಿ ಅವರು ಬಿಡಿಸಿದ ಚಿತ್ರವೊಂದನ್ನು ನೋಡಿದೆ. ಸೈಕಲ್ ಓಡಿಸಿಕೊಂಡು ಹೋಗುತ್ತಿರುವ ಮಂಕಿಯ ಚಿತ್ರವೊಂದನ್ನು ಅವರು 2016ರಲ್ಲಿಯೇ ಬಿಡಿಸಿದ್ದರು. ನನಗದು ತುಂಬಾ ಇಷ್ಟವಾಯ್ತು. ನನ್ನ ಮನಸಿನ ಕಲ್ಪನೆಗೆ ತುಂಬ ಹತ್ತಿರವಾದ ಚಿತ್ರವಾಗಿತ್ತು. ಹಾಗಾಗಿ ಕೂಡಲೇ ಸಂಪರ್ಕಿಸಿ ನನ್ನ ಐಡಿಯಾ ಹಂಚಿಕೊಂಡೆ. ಅವರೂ ಈ ಸಂಸ್ಥೆಯನ್ನು ಆರಂಭಿಸುವುದಕ್ಕೆ ನನ್ನ ಜೊತೆ ಸೇರಲು ಖುಷಿಯಿಂದ ಒಪ್ಪಿಕೊಂಡರು. ಅವರು ಚಿತ್ರಕ್ಕೆ ಇನ್ನೊಂದು ಮಂಕಿ ಸೇರಿಸಿ ನಮ್ಮ ಸಂಸ್ಥೆಯ ಲಾಂಛನವನ್ನಾಗಿಸಿಕೊಂಡೆವು' ಎಂದು ವಿವರಿಸುತ್ತಾರೆ ಮಾನ್ವಿತಾ. ಅಂಕಿತಾ ಕಿಣಿ ಇರುವುದು ನೆದರ್ಲೆಂಡ್‌ನಲ್ಲಿ. ಬರೀ ಕನ್ನಡ ಚಿತ್ರರಂಗಕ್ಕೆ ಮಾತ್ರ ಸೀಮಿತಗೊಳ್ಳದ ಈ ಸಂಸ್ಥೆ, ಈಗಾಗಲೇ ಹಲವು ಸಿನಿಮಾಗಳಿಗೆ ಕೆಲಸ ಮಾಡುತ್ತಿದೆ.w

'ಮ್ಯಾನ್‌ಕಿನ್ ಎನ್ನುವುದು ನಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಮೀರಿ ನಮ್ಮ ವ್ಯಕ್ತಿತ್ವಕ್ಕಿಂತ ಹಿರಿದಾದ ಏನನ್ನಾದರೂ ಸಾಧಿಸಬೇಕು ಎಂಬ ಹಂಬಲದಲ್ಲಿ ಹುಟ್ಟಿಕೊಂಡ ಸಂಸ್ಥೆ. ನಮ್ಮಿಬ್ಬರ ಕೌಶಲಗಳು ಪರಸ್ಪರ ಪೂರಕವಾಗಿವೆ. ನಮ್ಮಿಬ್ಬರ ಅನುಭವವೇ ಈ ಸಂಸ್ಥೆಯನ್ನು ಮುನ್ನಡೆಸುವ ಚಾಲಕಶಕ್ತಿಯಾಗಿದೆ' ಎನ್ನುತ್ತಾರೆ ಅಂಕಿತಾ ಕಿಣಿ.

'ಟಗರು ಸಿನಿಮಾದ ನಂತರ ನಾನು ಸಾಕಷ್ಟು ಸುತ್ತಾಡಿದೆ. ಬೇರೆ ಬೇರೆ ದೇಶಗಳಿಗೆ ಭೇಟಿ ಕೊಟ್ಟೆ. ಎಲ್ಲಿಗೇ ಹೋದರೂ ಅಲ್ಲಿನ ಚಿತ್ರರಂಗದ ಕುರಿತು ತಿಳಿದುಕೊಳ್ಳುತ್ತಿದ್ದೆ. ಎಲ್ಲ ಕಡೆಗಳಲ್ಲಿಯೂ ಸ್ಟೋರಿಬೋರ್ಡ್‌ಗೆ ತುಂಬ ಮಹತ್ವ ಕೊಡುತ್ತಾರೆ. ನಮ್ಮದೇ ನೆರೆ ಭಾಷೆಯ ತೆಲುಗಿನಲ್ಲಿಯೂ ಸ್ಟೋರಿಬೋರ್ಡ್‌ಗೆ ಸಾಕಷ್ಟು ಮಹತ್ವ ಕೊಡುತ್ತಾರೆ. ಆದರೆ ನಮ್ಮಲ್ಲಿ ಸ್ಟೋರಿ ಬೋರ್ಡ್‌ನ ವಿಷಯದಲ್ಲಿ ಅಷ್ಟೊಂದು ವೃತ್ತಿಪರತೆ ಇಲ್ಲ. ನಮ್ಮ ಸಂಸ್ಥೆಯು ತುಂಬ ವೃತ್ತಿಪರವಾಗಿ ಸ್ಟೋರಿ ಬೋರ್ಡ್ ಮಾಡಿಕೊಡುತ್ತದೆ ಮತ್ತು ಚಿತ್ರೀಕರಣಕ್ಕೆ ಹೋಗುವ ಮುನ್ನ ಇಡೀ ಚಿತ್ರದ ವಿಷುವಲ್ ಚಿತ್ರವೊಂದನ್ನು ರೂಪಿಸಿಕೊಡುತ್ತದೆ' ಎನ್ನುವ ಮಾನ್ವಿತಾಗೆ, ಮುಂದೆ ಇದೇ ಸಂಸ್ಥೆಯ ಮೂಲಕ ಬೇರೆ ಬೇರೆ ಪ್ರಯೋಗಗಳನ್ನು ಮಾಡುವ ಕನಸೂ ಇದೆ.


ಅಂಕಿತಾ ಕಿಣಿ

ನಿರ್ದೇಶನ ಮಾಡಬೇಕು ಎಂಬುದು ನನ್ನ ಬಹುದಿನದ ಕನಸು. ಅದಕ್ಕಾಗಿ ಬೇರೆಯವರನ್ನು ಅವಲಂಬಿಸುವುದರಲ್ಲಿ ಅರ್ಥವಿಲ್ಲ. ಈ ಸಂಸ್ಥೆಯ ಮೂಲಕವೇ ಮುಂದಿನ ದಿನಗಳಲ್ಲಿ ನಿರ್ದೇಶನಕ್ಕೆ ಇಳಿಯುತ್ತೇನೆ' ಎಂದು ಮುಂದಿನ ಕನಸನ್ನು ಹಂಚಿಕೊಳ್ಳುತ್ತಾರೆ. ■